# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 24.06.2011**

ಮಳೆಗಾಲ ಮುಗಿಯುವವರೆಗೆ ವಲಯ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರುಗಳು ಪ್ರತಿನಿತ್ಯ ಕಛೇರಿಗೆ ಬರುವ ಮುನ್ನ ವಲಯದ ಯಾವುದಾದರೂ ಒಂದು ಭಾಗದಲ್ಲಿ ತಪ್ಪದೇ ಒಂದು ಗಿಡ ನೆಡಲು ಪಾಲಿಕೆ ಆಯುಕ್ತರು ಇಂದು ವಲಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಯುಕ್ತರು ಇಂದು ಬೆಳಿಗ್ಗೆ ಸ್ಥಳೀಯ ಶಾಸಕರಾದ ಶ್ರೀ ಅರವಿಂದ ಲಿಂಬಾವಳಿ ರವರೊಂದಿಗೆ ಮಹದೇವಪುರ ವಲಯದಲ್ಲಿ ಹಮ್ಮಿಕೊಂಡ ತೀವ್ರ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡು ಪರಿಶೀಲನೆ ನಡೆಸಿದರು. ಮಹದೇವಪುರ ವಲಯ ಕಛೇರಿಯಿಂದ ಹೂಡಿವರೆಗೆ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗ ದುರಸ್ಥಿ, ರಸ್ತೆ ಗುಂಡಿ ಮುಚ್ಚುವ ಮತ್ತು ಸ್ವಚ್ಛತೆ ಕಾರ್ಯ ಕೈಗೊಳ್ಳಲಾಯಿತು.

ಮಹದೇವಪುರ ವಲಯದಲ್ಲಿ ಹಲವಾರು ದೊಡ್ಡ ದೊಡ್ಡ ಮಾಹಿತಿ ತಂತ್ರಜ್ಞಾನ ಮತ್ತು ಖಾಸಗಿ ಸಂಸ್ಥೆಗಳು ಇರುವುದರಿಂದ ಅವರೆಲ್ಲರೂ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳನ್ನು ಉಪಯೋಗಿಸುತ್ತಿದ್ದಾರೆ. ಈ ಪ್ರದೇಶದಲ್ಲಿ ಉತ್ತಮ ವಾತಾವರಣ ನಿರ್ಮಿಸುವ ಅವಶ್ಯಕತೆ ಇದೆ. ಆದ್ದರಿಂದ ವಲಯ ಅಧಿಕಾರಿಗಳು ಇಂತಹ ಸಂಸ್ಥೆಗಳನ್ನು ಸಂಪರ್ಕಿಸಿ, ರಸ್ತೆಬದಿ ಗಿಡಗಳನ್ನು ನೆಡಲು ಮತ್ತು ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿ ವಹಿಸಿ ಕೊಡಲು ಸೂಚಿಸಿದರು.

ದೇವಸಂದ್ರದ ಕೈಗಾರಿಕಾ ಪ್ರದೇಶದಲ್ಲಿ ರೈಲ್ವೆ ಪ್ಯಾರಲೆಲ್ ರಸ್ತೆಯಲ್ಲಿ ತಪಾಸಣೆ ಕೈಗೊಂಡು, ರಸ್ತೆ ದುಸ್ಥಿತಿಯಲ್ಲಿರುವುದನ್ನು ಆಯುಕ್ತರು ಗಮನಿಸಿದರು. ಈ ರಸ್ತೆಯಲ್ಲಿ ಬ್ರಿಗೇಡ್ ಗ್ರೂಪ್ ರವರಿಗೆ ಸೇರಿದ ಕನ್‌ವೆನ್ಷನ್ ಸೆಂಟರ್ ನಿರ್ಮಾಣಗೊಳ್ಳುತ್ತಿರುವುದರಿಂದ ಈ ಕನ್‌ವೆನ್ಷನ್ ಸೆಂಟರ್‌ಗೆ ಬರುವ ಜನರಿಗೆ ಅನುಕೂಲವಾಗಬೇಕಾದರೆ ಬ್ರಿಗೇಡ್ ಗ್ರೂಪ್ ರವರಿಂದ ರಸ್ತೆ ಅಭಿವೃದ್ಧಿಪಡಿಸಬೇಕಾಗಿದೆ ಎಂದು ತಿಳಿಸಿ, ಕೂಡಲೇ ಬ್ರಿಗೇಡ್ ಗ್ರೂಪ್ ಸಂಸ್ಥೆಯೊಂದಿಗೆ ದೂರವಾಣಿ ಮುಖಾಂತರ ಮಾತನಾಡಿ, ರಸ್ತೆಯ ಡಾಂಬರೀಕರಣ ಮಾಡಲು ಬ್ರಿಗೇಡ್ ಗ್ರೂಪ್ ಒಪ್ಪಿಕೊಂಡಿದೆ ಎಂದು ತಿಳಿಸಿದರು.

ತದನಂತರ ಹೂಡಿ ಉಪ ವಿಭಾಗದ ಕಾವೇರಿನಗರಕ್ಕೆ ಭೇಟಿ ನೀಡಿ, ಅಲ್ಲಿ 6 ಎಕರೆಯಷ್ಟು ಕ್ವಾರಿಪಿಟ್ ಇರುವುದರಿಂದ ಇದರಲ್ಲಿ ನಗರದಲ್ಲಿ ಉತ್ಪತ್ತಿಯಾಗುವ ಕಟ್ಟಡದ ಅವಶೇಷಗಳನ್ನೆಲ್ಲಾ ತುಂಬಿ, ಇಲ್ಲಿ ಒಂದು ಉತ್ತಮ ಆಟದ ಮೈದಾನ ಮತ್ತು ಉದ್ಯಾನವನ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಸ್ಥಳೀಯ ಶಾಸಕರು ಆಯುಕ್ತರಲ್ಲಿ ಮನವಿ ಮಾಡಿದರು. ಆಯುಕ್ತರು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ವಲಯ ಜಂಟಿ ಆಯುಕ್ತರಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶ್ರೀ ಎನ್. ಪಿಳ್ಳಪ್ಪ ಮತ್ತು ಶ್ರೀ ಎನ್.ಆರ್. ಶ್ರೀಧರ್ ರೆಡ್ಡಿ ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 24.06.2011**

## ವಾರ್ಡ್-22ರ ವಿಶ್ವನಾಥ ನಾಗೇನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಸಹಾಯವಾಣಿ ಕೇಂದ್ರ ಉದ್ಘಾಟನಾ ಸಮಾರಂಭ

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯ ವ್ಯಾಪ್ತಿಯಲ್ಲಿರುವ ವಾರ್ಡ್-22, ವಿಶ್ವನಾಥ ನಾಗೇನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಸಹಾಯವಾಣಿ ಕೇಂದ್ರ, ಅಂಗನವಾಡಿ, ಸಮುದಾಯ ಭವನದ ಉದ್ಘಾಟನೆಯನ್ನು ಉಪ ಮಹಾಪೌರರಾದ ಶ್ರೀ ಎಸ್. ಹರೀಶ್ ರವರು ಸ್ಥಳೀಯ ಸದಸ್ಯರಾದ ಶ್ರೀಮತಿ ಮುನಿರತ್ನಮ್ಮ ರವರೊಂದಿಗೆ ನೆರವೇರಿಸಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಉಪ ಮಹಾಪೌರರು ನಗರವು ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಲೇ ಇದೆ. ಅಂದು ನಾಡಪ್ರಭು ಕೆಂಪೇಗೌಡರು ನಗರದಲ್ಲಿ 216 ಕೆರೆಗಳನ್ನು ನಿರ್ಮಿಸಿ, ಸುಂದರ ನೈಸರ್ಗಿಕವಾದ ಬೆಂಗಳೂರನ್ನು ನಿರ್ಮಿಸಿಕೊಟ್ಟಿದ್ದಾರೆ. ಆದರೆ ನಾವು ಅವುಗಳನ್ನು ಲೇಔಟ್‌ಗಳನ್ನಾಗಿ ಪರಿವರ್ತಿಸಿಕೊಳ್ಳುತ್ತಿದ್ದೇವೆ. ಇದರಿಂದ ನಗರದ ಸೌಂದರ್ಯಕ್ಕೆ ಧಕ್ಕೆಯುಂಟಾಗುತ್ತಿರುವುದಲ್ಲದೇ ಅಂತರ್ಜಲ ಮಟ್ಟವೂ ಸಹ ಕುಸಿಯುತ್ತಿದೆ. ಆದ್ದರಿಂದ ಮುಂಬರುವ ದಿನಗಳಲ್ಲಿ ಪ್ರಸ್ತುತ ಇರುವ ಕೆರೆಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳುವುದು ನಿಮ್ಮ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಪ್ರತಿದಿನ ನಗರದಲ್ಲಿ ದಿನ ಒಂದಕ್ಕೆ 5000 ಟನ್‌ಗೂ ಹೆಚ್ಚಿನ ಕಸ ಉತ್ಪತ್ತಿಯಾಗುತ್ತಿದ್ದು, ಅದನ್ನು ವಿಲೇವಾರಿಗೊಳಿಸುವುದು ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ಸಾರ್ವಜನಿಕರು ತಮ್ಮ ಮನೆಯ ಕಸವನ್ನು ಎಲ್ಲೆಂದರಲ್ಲಿ ರಸ್ತೆಯ ಮೇಲೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಹಾಕದೇ ವಿಂಗಡಣೆಗೊಳಿಸಿ ಸಾವಯವ ಗೊಬ್ಬರವನ್ನು ತಯಾರಿಸಲು ಸಹಕಾರ ನೀಡಬೇಕು. ಇದರಿಂದ ಕಸ ವಿಲೇವಾರಿಯ ಸಮಸ್ಯೆ ಕಡಿಮೆಯಾಗುತ್ತದೆ ಎಂದು ಉಪ ಮಹಾಪೌರರು ತಿಳಿಸಿದರು..

ನಂತರ ವಾರ್ಡ್-34ರ ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಎಂ. ನಾಗರಾಜ್ ರವರು ಮಾತನಾಡಿ, ಕೇವಲ ತಮ್ಮ ಸ್ವಾರ್ಥಕ್ಕಾಗಿ ಯೋಚಿಸುತ್ತಿರುವ ಇಂದಿನ ಪೀಳಿಗೆಗೆ ದಿವಂಗತ ಪಟೇಲ್ ಮುನಿಯಪ್ಪನವರು ಮಾದರಿಯಾಗಿದ್ದಾರೆ. ಅಂದು ಅವರು ದಾನದ ರೂಪದಲ್ಲಿ ನೀಡಿದ ಈ ಜಾಗದಲ್ಲಿಯೇ ಅಂದಾಜು 70 ಲಕ್ಷ ರೂ.ಗಳ ವೆಚ್ಚದಲ್ಲಿ ಇಂದು ಸಾರ್ವಜನಿಕರಿಗೆ ಅವಶ್ಯಕವಾದ ಸುಸಜ್ಜಿತ ಸಹಾಯವಾಣಿ ಕೇಂದ್ರವನ್ನು ನಿರ್ಮಿಸಲಾಗಿದೆ ಎಂದು ಗೌರವದಿಂದ ಸ್ಮರಿಸಿಕೊಂಡರು. ಇನ್ನು ಮುಂದೆ ಸಾರ್ವಜನಿಕರು ಕಂದಾಯ ಪಾವತಿ ಹಾಗೂ ಖಾತೆಗೆ ಸಂಬಂಧಿಸಿದ ಮಾಹಿತಿ ಮತ್ತು ಇನ್ನಿತರ ಕುಂದುಕೊರತೆಗಳನ್ನು ಈ ಸಹಾಯವಾಣಿಯಲ್ಲಿ ಬಗೆಹರಿಸಿಕೊಳ್ಳಲು ತುಂಬಾ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಬಿ. ವೆಂಕಟೇಶ್, ಶ್ರೀ ಎನ್.ಎಂ. ಕೃಷ್ಣಮೂರ್ತಿ, ಶ್ರೀ ಆನಂದ್. ವಿ, ಶ್ರೀ ಜಯಪ್ಪ ರೆಡ್ಡಿ. ಸಿ.ಆರ್, ಶ್ರೀಮತಿ ಫೌಜೀಯಾ ಬೇಗಂ ಹಾಗೂ ಶ್ರೀ ಗೋವಿಂದರಾಜು. ಎನ್ ಹಾಗೂ ಜಂಟಿ ಆಯುಕ್ತರಾದ ಶ್ರೀ ಶಿವಶಂಕರ್ ಮತ್ತು ಮುಖ್ಯ ಅಭಿಯಂತರರಾದ ಶ್ರೀ ಸೋಮಶೇಖರ್ ಮತ್ತು ಪಾಲಿಕೆಯ ಸಿಬ್ಬಂದಿ ಶ್ರೀ ರಾಜಣ್ಣ ಹಾಗೂ ಸ್ಥಳೀಯ ಗಣ್ಯವ್ಯಕ್ತಿಗಳು ಉಪಸ್ಥಿತರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**